ಶ್ರೀ ಎಚ್. ಸಿದ್ದವೀರಪ್ಪ.—ಸ್ಟೋರ್ಸ್ ಪರ್ಚೇಸ್ ಕಮಿಟಿಗೆ ಅಡ್ವೈಜ್ ಮಾಡಲು ಬೇಕಾದಷ್ಟು ಸಮಿತಿಗಳಿದ್ದವು. ಈಗ ಒಂದು ಕ್ಯಾಬಿನೆಟ್ ತೀರ್ಮಾನವಾಗಿದೆ. ಅದರ ಪ್ರಕಾರ ಸ್ಟೋರ್ಸ್ ಪರ್ಚೇಸ್ ಕಮಿಟಿ ಮೆಡಿಕಲ್ ಇರಾಖೆಗೆ ಬೇಕಾದ್ದನ್ನು ಕೊಳ್ಳಬೇಕಾದ್ದಿಲ್ಲ, ಅದು ಕೊಳ್ಳಲು ಸಿದ್ಧಾನವಾಗುವುದು. ಆದುದರಿಂದ ಬೇರೆ ಸಮಿತಿ ಮಾಡಿ ಅದರ ಮೂಲಕ ಖರೀದಿ ಮಾಡಬೇಕು ಎಂದು ಕ್ಯಾಬಿನೆಟ್ ತೀರ್ಮಾನವಾಗಿದೆ. ಅದರ ಪ್ರಕಾರ ಎಷ್ಟು ಜನ ಆ ಸಮಿತಿಯಲ್ಲಿರಬೇಕು ಎಂಬುದು ಇನ್ನೂ ನಿರ್ಧಾರಮಾಡಿಲ್ಲ. ಅದರ ಕಡೆ ಈಗ ಗಮನ ಕೊಡುತ್ತಿದ್ದಾರೆ. My idea is to appoint a committee with the Secretary, Health Department as the Chairman, and Secretary Commerce and Industries Department, some other senior Secretaries and the Director of Health Services as members for the purchase of hospital necessities in the State.

ಶ್ರೀ ಎಸ್. ಬಂಗಾರಪ್ಪ.—ಹಿಂದಿದ್ದ ಸಮಿತಿಗಳಲ್ಲಿ ರಾಜ್ಯದಲ್ಲಿ ಔಷಧಿ ತಯಾರಿಸುವ ಸಂಸ್ಥೆಗಳ ಅದರಲ್ಲೂ ದೊಡ್ಡದೊಡ್ಡ ಸಂಸ್ಥೆಗಳ ಕೆಲವು ಮಂದಿ ಮಾಲಕರಾಡಿಗಳು, ಕೋಟ್ಯಾಧೀಶ್ವರರು ಇದ್ದುದರಿಂದ ಅವರ ಸಂಸ್ಥೆಗಳಿಂದಲೇ ಹೆಚ್ಚಾಗಿ ಔಷಧಿಗಳನ್ನು ಖರೀದಿ ಮಾಡುತ್ತಿದ್ದರು. ಈ ಬಗ್ಗೆ ಕೆಲವರು ಸಂಸ್ಥೆಗಳವರು ದೂರನ್ನು ಸಲ್ಲಿಸಿದರು. ಹಾಗೆ ದೂರುಗಳು ಬಂದಿರುವುದು ನಿಜವೇ ? ಬಂದಿದ್ದರೆ ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಕೆಲವು ಫಿರ್ಯಾದುಗಳು ಬಂದಿವೆ. ಎಸ್. ಪಿ. ಡಿ. ಯಲ್ಲಿ ಕೆಲವರ ಕೈವಾಡವಿದೆ ಎಂದು ದೂರುಗಳು ಬಂದಿದ್ದುವು. ಅದರ ಬಗ್ಗೆ ಗಮನಿಸಿ ಅದು ಸರಿಯಲ್ಲ, ಇದಕ್ಕಾಗಿ ಒಂದು ಬೇರೆ ಸಮಿತಿ ಮಾಡಬೇಕು ಎಂದು ಸರಕಾರ ತೀರ್ಮಾನ ಮಾಡಿದೆ.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ಎಷ್ಟೋ ಆನ್ಪತ್ರೆಗಳಲ್ಲಿ ಔಷಧಿಗಳಿಲ್ಲದೆ ತೊಂದರೆಯಾಗಿರುವುದಕ್ಕೆ ಎಸ್. ಪಿ. ಸಿ. ರಚನೆಯಾಗದಿರುವುದು ಕಾರಣವೇ ಅಥವಾ ಅದು ಸರಿಯಾಗಿ ಕೆಲಸ ಮಾಡದಿರುವುದು ಕಾರಣವೇ ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ರೇಟ್ ಕಾಂಟ್ರಾಕ್ಟ್ ಪದ್ಧತಿ ಏನಿದೆ ಅದರ ಪ್ರಕಾರ ಕೊಂಡುಕೊಳ್ಳಬಾರದು ಎಂದು ತೀರ್ಮಾನಿಸಿ ಆಗಸ್ಟ್‌ನಿಂದ ಯಾವುದನ್ನೂ ಕೊಂಡಿಲ್ಲ. ಈ ವರ್ಷದಲ್ಲಿ ಬಹುಶಃ ಇನ್ನೊಂದು ವಾರದಲ್ಲಿ ಔಷಧಿಗಳ ಸ್ಟಾಕನ್ನು ನೋಡಿ ಬೇಕಾದ್ದನ್ನು ಕೊಳ್ಳಬೇಕು ಎಂದು ತೀರ್ಮಾನವಾಗಿದೆ. ಇದುವರೆಗೆ ಕೊಳ್ಳದಿರಲು ಕಾರಣ ಬೇಕಾದಷ್ಟು ಔಷಧಿಗಳ ಸ್ಟಾಕ್ ಇತ್ತು. ಈಗ ಔಷಧಿಗಳಿಲ್ಲ. ಅವನ್ನು ಕೊಳ್ಳಲು ಸಂಬಂಧಪಟ್ಟ ಸಮಿತಿ ಸೂಕ್ತ ಕಾರ್ಯಕ್ರಮ ಕೈಕೊಳ್ಳುವುದು.

ಶ್ರೀ ಕೆ. ಎಚ್. ಹನುಮೇಗೌಡ.—ರೇಟ್ ಕಾಂಟ್ರಾಕ್ಟ್ ಸಿಸ್ಟಂ ಪ್ರಕಾರ ಮತ್ತು ಟೆಂಡರ್ ಮೂಲಕ ಕೊಳ್ಳುತ್ತಿರುವುದರಿಂದ ಗ್ರಾಮಾಂತರಗಳಿಗೆ ಔಷಧಿ ಸರಿಯಾಗಿ ಸರಬರಾಜಾಗುತ್ತಿಲ್ಲ. ಒಂದು ರೂಪಾಯಿಗೆ 120 ಪಾತ್ರೆಯಂತೆ ದೊರೆಯುವ ಕೆಲವು ಸುಲಭ ಬೆಲೆ ಔಷಧಿಗಳನ್ನು ಈಗ ಸರಬರಾಯಿ ಮಾಡುತ್ತಿದ್ದಾರೆ. ಇದರಿಂದ ಒಳ್ಳೆಯ ಪರಿಣಾಮವಾಗುತ್ತಿಲ್ಲ.

ಅಧ್ಯಕ್ಷರು.—ಅದಕ್ಕಾಗಲೇ ಉತ್ತರ ಹೇಳಿದ್ದಾರೆ.

HOUSES CONSTRUCTED BY C.I.T. B., BANGALORE

21. Sri T. R. SHAMANNA (Fort).—

Will the Minister for Municipal Administration be pleased to state :—

(*a*) whether it is a fact that about 100 cheap houses at Survey No. 1 to 72 at Gavipuram Division No. 30 were constructed by the City Improvement Trust Board in the year 1961 and allotted to the low paid Government officials :

(*b*) if so, whether electric connection has been given to these houses as provided in the estimate,

(c) whether there is any dispute between the Electric Contractor and the City Improvement Trust Board regarding this work;

(d) whether any representation from the occupants urging for electrification to their houses has been received by Government;

(e) if so, the steps that would be taken to give light to the above houses ?

Sri B. BASAVALINGAPPA (Minister for Municipal Administration).—

(a) Yes, houses were allotted during the year 1960 to the hut dwellers of Sri Ramakrishnamutt on hire purchase system for a period of 30 years.

(b) No.

(c) Yes.

(d) Yes.

(e) Action will be taken to cancel to original contract. Electrical connections to the houses will be given as early as possible.

ಶ್ರೀ ಟಿ. ಆರ್. ಶಾಮಣ್ಣ.—ಈಗ ಮನೆಗಳನ್ನು ಕಟ್ಟಿಸಿ ನೌಕರರ ಸ್ವಾಧೀನಕ್ಕೆ ಕೊಟ್ಟು 10-12 ವರ್ಷವಾಗಿದೆ. ಆದರೂ ಕೂಡ ಅವರಿಗೆ ವಿದ್ಯುತ್ತನ್ನು ಒದಗಿಸಿಲ್ಲ. ಆದುದರಿಂದ ಇನ್ನು 6 ತಿಂಗಳೊಳಗಾದರೂ ಒದಗಿಸಲು ಆಶ್ವಾಸನೆ ಕೊಡುವಿರಾ ?

†ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಈ ವಿಷಯವನ್ನು ಗಮನಕ್ಕೆ ತಂದಿದ್ದಾರೆ, ಅದಕ್ಕಾಗಿ ವಂದನೆಗಳು. ಕಂಟ್ರಾಕ್ಟರೊಡನೆ ವಿವಾದ ಬಂದು ಇಲ್ಲಿಯವರೆಗೆ ವಿದ್ಯುತ್ತನ್ನು ಒದಗಿಸಲು ಸಾಧ್ಯವಾಗಲಿಲ್ಲ. ಶೀಘ್ರವಾಗಿ ಇನ್ನೂ ಮೂರು ತಿಂಗಳಲ್ಲಿ ವಿದ್ಯುಚ್ಛಕ್ತಿ ಸಂಪರ್ಕವನ್ನು ನೀಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಎಂ. ನಾಗಣ್ಣ.—1960ರಲ್ಲಿ ಕೊಟ್ಟಂಥ ಮನೆಗಳನ್ನು ಪಡೆದವರು ಪರಭಾರೆ ಮಾಡಿರುವರೇ ?

ಶ್ರೀ ಬಿ. ಬಸವಲಿಂಗಪ್ಪ,—ಈ ಸಮಾಚಾರ ಈಗ ನನ್ನ ಬಳಿ ಇಲ್ಲ. ಬೇರೆ ಪ್ರಶ್ನೆ ಕೇಳಿದರೆ ವಿವರ ಒದಗಿಸಬಹುದು.

Sri B. B. SAYANAK.—May I know what is the reason for the dispute between the Electricity Contractor and the City Improvement Trust Board ?

Sri B. BASAVALINGAPPA.—The dispute arose because the contractor did not comply with the conditions of the contract inspite of several notices issued to him by the C.I.T.B. Final notice has now been issued to him and if he does not comply with it then we are going to cancel the contract and see that the work is got done from others.

ಶ್ರೀ ಟಿ. ಆರ್. ಶಾಮಣ್ಣ.—ಈಗ ಅಲ್ಲಿ ವಾಸಮಾಡುವವರು ನಾಲ್ಕನೆ ದರ್ಜೆ ನೌಕರರು ಮತ್ತು ಅವರದು ಯಾವ ತಪ್ಪೂ ಇಲ್ಲ. ಆದುದರಿಂದ ಈಗ ಖರ್ಚು ಹೆಚ್ಚಾದರೂ ಕೂಡ ಅದನ್ನು ಬಡವರಮೇಲೆ ಹಾಕದೆ ದೀಪದ ಸೌಕರ್ಯ ಕಲ್ಪಿಸಲು ಆಶ್ವಾಸನೆ ಕೊಡುವಿರಾ ?

Sri B. BASAVALINGAPPA.—I will examine that point.

† Indicate that the remarks or speeches have not been revised by the member concerned.